ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೧೩ನೇ ಮಾರ್ಚ್ ೧೯೮೭/ಫಾಲ್ಗುಣ ೨೨, ೧೯೦೮ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಧಾರವಾಡ ಜಿಲ್ಲೆಯಲ್ಲಿ ಜಾಗೀರ ಗ್ರಾಮಗಳು

(೭೨೪) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಬೆನಕನಹಳ್ಳಿ, ಹಂಚಿನಾಳ, ಮತ್ತು ಇನಾಮಕೊಪ್ಪ ಈ ಮೂರು ಗ್ರಾಮಗಳು ಪೂರ್ಣವಾಗಿ ''ಮುಂಬಯಿ ವಿಲೀನ ಪ್ರದೇಶಗಳ ಜಾಗೀರ ರದ್ದತಿ ಕಾನೂನಿನನ್ವಯ ಜಾಗೀರ ಗ್ರಾಮಗಳೆಂದು ಪರಿಗಣಿಸಿ ಅವುಗಳನ್ನು ವಶಪಡಿಸಿಕೊಂಡು ಜಮಿನುಗಳ ವಿಲೇವಾರಿಯನ್ನು ಆ ಕಾನೂನಿನನ್ವಯ ಮಾಡಬೇಕೆಂದು ೧೯೫೬ರ ಹಿಂದೆಯೇ ಆಗಿನ ಮುಂಬಯಿ ಸರ್ಕಾರ ಆದೇಶಿಸಿದ್ದು ನಿಜವೇ ?

(ಆ) ಇದಕ್ಕೆ ವ್ಯತಿರಿಕ್ತವಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಸದರಿ ಮೂರು ಗ್ರಾಮಗಳನ್ನು ''ಪರಗಣಾ ವತನ ಇನಾಮ'' ಗ್ರಾಮಗಳೆಂದು ಘೋಷಿಸಿ ಆ ಗ್ರಾಮಗಳ ಸದರಿ ಜಮಿನುಗಳನ್ನೂ ಹಳೆಯ ಇನಾಂದಾರರಿಗೆ ಗ್ರಾಂಟ್ ಮಾಡಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಇ) ಕಂದಾಯ ಇಲಾಖೆಯ ಕ್ರಮವನ್ನೂ ಸರ್ಕಾರ ರದ್ದುಗೊಳಿಸಿ ಮತ್ತೆ ಮೂರು ಗ್ರಾಮಗಳನ್ನೂ ಜಾಗೀರ ಗ್ರಾಮಗಳೆಂದು ನಿರ್ಧರಿಸಿ ಭೂ ಹಿಡುವಳಿ ಹಕ್ಕನ್ನೂ ಸಂಬಂಧಿಸಿದ ರೈತರಿಗೆ ಕೊಡಲು ಆದೇಶಿಸಿದ್ದು ನಿಜವೆ ?

(ಈ) ಕಂದಾಯ ಇಲಾಖೆಯ ಅಧಿಕಾರಿಗಳ ಕ್ರಮದಿಂದ ಇನಾಂದಾರರು ಉಚ್ಚ ನ್ಯಾಯಾಲಯಕ್ಕೆ ಹೋಗಿ ಸರ್ಕಾರದವರ ನಿರ್ಧಾರವನ್ನು ಪ್ರಶ್ನಿಸಲಿಕ್ಕೆ ಅವಕಾಶವಾಗಿದೆಯೆಂಬ ಆಂಶವು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಉ) ಕಾನೂನಿನಲ್ಲಿರುವ ಅಸ್ಪಷ್ಟತೆಯನ್ನು ನಿವಾರಿಸಿ ಸರ್ಕಾರದವರ ಆದೇಶವು ಜಾರಿಯಾಗುವಂತೆ ಮಾಡಲು ಸದರಿ ಕಾನೂನನ್ನು ಸರ್ಕಾರದವರು ತಿದ್ದುಪಡಿ ಮಾಡಲು ಯೋಚಿಸಿರುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು):—

(ಅ) ದಿನಾಂಕ ೧-೧೧-೧೯೫೬ಕ್ಕೆ ಹಿಂದೆ ಮುಂಬಯಿ ಸರ್ಕಾರವು ಈ ಮೂರು ಇನಾಂ ಗ್ರಾಮಗಳಿಗೆ ಮುಂಬಯಿ ವಿಲೀನ ಪ್ರದೇಶಗಳ ವಿಸಲೇನಿಯಸ್ ಆಲಿಯನೇಷನ್ಸ್ ರದ್ದತಿ ಕಾಯಿದೆ ೧೯೫೫ ಅನ್ವಯಿಸುವುದೆಂದು ಆದೇಶಿಸಿತ್ತು. ಇದನ್ನು ವಿರೋಧಿಸಿ ಗುತ್ತಿಗೆದಾರರು ಮುಂಬಯಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಅವರ ಮನವಿ ಮೇಲೆ ಆ ಸರ್ಕಾರ ತೆಗೆದುಕೊಂಡ ಅಂತಿಮ ತೀರ್ಮಾನ

ಈ ಸರ್ಕಾರಕ್ಕೆ ತಿಳಿಯದು. ದಿನಾಂಕ ೧೦-೧೧-೧೯೫೬ರ ನಂತರ ಕರ್ನಾಟಕ ಸರ್ಕಾರವು ಗೇಣಿದಾರರು ಮತ್ತು ಇನಾಂದಾರರ ಮನವಿಗಳನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ ೩೬ ಪಿಎನ್‌ಎಂ ೮೨, ದಿನಾಂಕ ೧೭-೬-೧೯೮೨ರಲ್ಲಿ ಮುಂ.ವಿ.ಪ್ರ. ವಿ.ಅ.ರ ಕಾಯಿದೆ ೧೯೫೫ ಈ ಮೂರೂ ಗ್ರಾಮಗಳಿಗೆ ಅನ್ವಯಿಸುತ್ತದೆ ಎಂದೂ ತೀರ್ಮಾನಿಸಿದೆ.

(ಆ) ಕರ್ನಾಟಕ ಸರ್ಕಾರದ ಸಂಖ್ಯೆ ಆರ್‌ಡಿ ೩೬ ಐಎನ್‌ಎಂ ೮೨ ದಿನಾಂಕ ೧೭-೬-೧೯೮೨ರ ಆದೇಶಕ್ಕೆ ವ್ಯತಿರಿಕ್ತವಾಗಿ ಕಂದಾಯ ಅಧಿಕಾರಿಗಳು ಕ್ರಮ ತೆಗೆದುಕೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

(ಇ) (ಆ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

(ಈ) ಇಲ್ಲ.

(ಉ) ಈ ವಿಷಯದ ಬಗ್ಗೆ ಏನಾದರೂ ಪರಿಹಾರ ಕ್ರಮ ಆಗತ್ಯವಿದೆಯೆ, ಎಂಬುದನ್ನು ಪರಿಶೀಲಿಸಲು ಮುಂಬಯಿ ಪ್ರದೇಶದಲ್ಲಿನ ಇದೇ ರೀತಿಯ ಇನಾಂ ಗ್ರಾಮಗಳ ಬಗ್ಗೆ ಮುಂಬಯಿ ಸರ್ಕಾರ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬ ಬಗ್ಗೆ ವಿವರ ತರಿಸಲಾಗುತ್ತಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ''ಗುತ್ತಿಗೆದಾರರು ಮುಂಬಯಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಅವರ ಮನವಿ ಮೇಲೆ ಆ ಸರ್ಕಾರ ತೆಗೆದುಕೊಂಡ ಅಂತಿಮ ತೀರ್ಮಾನ ಈ ಸರ್ಕಾರಕ್ಕೆ ತಿಳಿಯುದು'' ಎಂದೂ ಉತ್ತರದಲ್ಲಿ ಸೂಚಿಸಿದ್ದೀರಿ. ಆದರೆ.....

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಆ ಕಡೆಯ ಸದಸ್ಯರು ಹೆಚ್ಚು ಜನ ಬಂದೇ ಇಲ್ಲ. ನಿಮ್ಮ ಜನತಾ ಸರ್ಕಾರದ ಮಂಟ್ರಿ ಎಲ್ಲಿಗೆ ಬಂತು ನೋಡಿ. ಬೆಳಗಿನ ಹೊತ್ತು ಕಾಫಿ, ತಿಂಡಿ ಇಟ್ಟರೆ ಸದಸ್ಯರು ಬರುತ್ತಾರೆ, ಮಧ್ಯಾಹ್ನದ ಹೊತ್ತು ಇಟ್ಟರೆ ಯಾರು ಬರುತ್ತಾರೆ ? ಕೋರಂ ಇದೆಯೋ, ಇಲ್ಲವೋ ನೋಡಿ...

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಆಪ್ಪ ಲಘುವಾಗಿ ಮಾತನಾಡುವುದು ಬೇಡ.

ಅಧ್ಯಕ್ಷರು.—ಮಾನ್ಯ ಕಾನಡೆಯವರೇ, ತಾವು ದಯವಿಟ್ಟು ಕೂಡಿ. ಮಾನ್ಯ ದೊಡ್ಡಮೇಟಿಯವರೆ, ನಿಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೋಗ ಪಾರ್ಲಿಮೆಂಟ್‌ನಲ್ಲಿ ಕೂಡ ಇದೆ. ಇದನ್ನು ಬಿಡಿಸಬೇಕು. ಇದು ಆಲ್ ಇಂಡಿಯ ಫಿಲೋಮಿನ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ.....

ಶ್ರೀ ವೇದಾಂತ ಹೆಮ್ಮಿಗೆ.—ನಮಗಿಂತ ನೀವು ಬಹಳ ಎಚ್ಚರವಾಗಿರಬೇಕು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ ಅಲ್ಲಿರತಕ್ಕ ಗ್ರಾಮಸ್ಥರಣ, ಗೋಮಾಳ ಸ್ಮಶಾನ ಎಲ್ಲವೂ ಇನಾಂತಿ ಸ್ವತ್ತು ಎನ್ನತಕ್ಕ ಪ್ರಶ್ನೆ ಬಂದಿದೆ. ಮಾನ್ಯ ಸಚಿವರಾದ ಬೊಮ್ಮಾಯಿಯವರಿಗೂ ಆ ಹಳ್ಳಿಗಳ ಸಂಪೂರ್ಣ ಪರಿಚಯ ಇದೆ. ಆದ್ದರಿಂದ ಆ ಜನರಿಗೆ ಸೇರಬೇಕಾದ ಭೂಮಿ ಸುಲಭವಾಗಿ ಸಿಕ್ಕಹಾಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದೆಂ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದಂತೆ ಆ ಗ್ರಾಮಗಳನ್ನು ನಾನು ಬಲ್ಲೆ. ಈ ಸಮಸ್ಯೆ ಕಳೆದ ೩೦ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ೧೯೮೨ ರಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ ಮನವಿಗಳು ಬಂದಿವೆ. ಈ ಬಗ್ಗೆ ಮಾನ್ಯ ಸದಸ್ಯರ ತಂದೆಯವರಾದ ಅಂದಾನಪ್ಪ ದೊಡ್ಡಮೇಟಿಯವರು ಕೋರ್ಟಿಗೆ ಹೋಗಿ ಸಾಕ್ಷಿ ಹೇಳಿದಾಗ ಒಂದು ಆಜ್ಞೆ ಹೊರಟಿದೆ. ನಾವು ಮಹಾರಾಷ್ಟ್ರದಿಂದ ಮಾಹಿತಿಯನ್ನು ತರಿಸುತ್ತೇವೆ. ಅದು ಬಂದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದೂ ಹೇಳಬಯಸುತ್ತೇನೆ.